ಬಿರುಕು ಬಿಟ್ಟಿದ್ದ ಗೋಡೆಯ ಸುಣ್ಣವನ್ನು ತನ್ನ ಗಲೀಜಾಗಿದ್ದ ಉಗುರಿನಿಂದ ಮೆಲ್ಲನೆ ಒತ್ತಿದರು. ಸುಣ್ಣದ ತುಣುಕುಗಳು ಉದುರಿದವು. ಚಿತ್ರಗಳು ಒಂದೊಂದಾಗಿ ಹೊರ ಬಂದವು. ಒಂದು ಜನ್ಮದ ದಾಹ ತೀರಿದಂತೆ ಮಮ್ಮುಮುಕ್ರಿಗೆ ಅನಿಸಿತು.

ಆಮೇಲೆ, ಅವರು ಹಸಿರೆಲೆಗಳನ್ನು ಕೆಂಪು ಕಲ್ಲಿನ ತುಂಡುಗಳನ್ನು, ಇದ್ದಿಲ ತುಂಡುಗಳನ್ನು ಗುಡ್ಡೆ ಹಾಕಿಕೊಂಡು ಮೈ ಮರೆತು ಚಿತ್ರ ಬಿಡಿಸತೊಡಗಿದರು. ಡ್ರಾಗನ್ ಒಂದರ ಬೆನ್ನಿನಲ್ಲಿ ನೆಮ್ಮದಿಯಿಂದ ನಿದ್ದೆ ಮಾಡುತ್ತಿರುವ ಮಗು. ತನ್ನದೇ ಹೊಟ್ಟೆಗೆ ಚೂರಿಯಿಂದ ಇರಿಯುತ್ತಿರುವ ಒಬ್ಬ ದರಿದ್ರ.

'ಇದೇನಿದು ನನ್ನ ರಬ್ಬೇ... ಮನೆಯ ಗೋಡೆಯಲ್ಲಿ ಚಿತ್ರ ಬಿಡಿಸೋದಾ?'

ಆ ಕೂಗು ಎಲ್ಲಿಂದ ಬಂದಿತ್ತು?

ಮುಕ್ರಿಯನ್ನು ತಡೆಯಲು ಹೊರಟವರು ಯಾರು?

ಮುಕ್ರಿ ಯಾಕೆ ಹೀಗೆ ಉದ್ರೇಕಗೊಂಡಿದ್ದಾರೆ?

ಉತ್ತರವಿಲ್ಲದ ಒಂದು ದೀರ್ಘ ಮೌನದ ನಂತರ ತಿಳಿಯಿತು:

ಮಮ್ಮುಮುಕ್ರಿಯನ್ನು ಹುಚ್ಚಾಸ್ಪತ್ರೆಗೆ ಸೇರಿಸಿದ್ದಾರೆ.



ಇದೆಲ್ಲ ತಿಳಿದಾಗ ನನ್ನ ಮನಸ್ಸು ಕೆಟ್ಟಿತು.

ಹಾಗೆಲ್ಲ ಬಹಳ ಸುಲಭದಲ್ಲಿ ಮರೆತು ಬಿಡುವ ಹಾಗಿಲ್ಲ; ವಿದ್ಯೆ ಕಲಿಸಿದ ಉಸ್ತಾದ್ ಅವರು.

ಚಂದನದೆಣ್ಣೆಯ ಪರಿಮಳದಂತಹಾ ಪ್ರೀತಿ. ಗಂಜಿಯಲ್ಲಿ ಅದ್ದಿದ ಬಿಳಿ ಬಟ್ಟೆಯಿಂದ ಹೊಮ್ಮುವ ಸಂಗೀತ. ಸ್ಲೇಟಿನಲ್ಲಿ ಮೂಡಿಸಿದ ಯೇಸುಕ್ರಿಸ್ತ. ಕತೆಗಳು ಒಂದೊಂದಾಗಿ ಕಿವಿಗೆ